**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ**

**ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಮಾರ್ಚ್ 2023**

**ವಿಷಯ: ಕನ್ನಡ (01)**

**ಮೌಲ್ಯಮಾಪನದ ಕೀಲಿಕೈ ಉತ್ತರಗಳು**

| ಪ್ರ. ಸಂ. | **ಕೀಲಿಕೈ ಉತ್ತರಗಳು** | ಅಂಕಗಳು |
|---|---|---|
| 1. | ಇ) ರಾವಣನ ತಮ್ಮ | 1 |
| 2. | ಈ)ಕೂಡಲಸಂಗಮದೇವ | 1 |
| 3. | ಅ)ಕೀಚಕ | 1 |
| 4. | ಆ)ಮಡಿಯುಟ್ಟ ಭಕ್ತನಂತೆ | 1 |
| 5. | ಅ)ಪೂಣಚ್ಚಿ | 1 |
| 6. | ಅ)ಡಾ.ಸಿ.ಎನ್.ಆರ್.ರಾವ್ | 1 |
| 7. | ಅ)ವಿಂಗ್ಸ್ ಆಫ್ ಫೈರ್ | 1 |
| 8. | ಆ)ಟೆಲಿಫೋನ್ | 1 |
| 9. | ಈ)ವೇಲಾಯುಧ | 1 |
| 10. | ಈ)ಶಿಕಾರಿಗಂಡಿಯಲ್ಲಿ | 1 |
| 11. | ಅ)ಪುಲಿಗೆರೆ ಸೋಮನಾಥ 3)ಪಗೆಯಂ ಬಾಲಕನೆಂಬರೇ<br>ಆ)ಪುರಂದರದಾಸರು 6)ಜಾಲಿಯ ಮರದಂತೆ<br>ಇ)ಹಬ್ಬಲಿ ಅವರ ರಸಬಳ್ಳಿ 5)ಗರತಿಯ ಹಾಡು<br>ಈ)ದ.ರಾ.ಬೇಂದ್ರೆ 2)ಬೆಳಗುಜಾವ<br>ಉ)ಒಮ್ಮೆ ನಗುತ್ತೇವೆ 1)ಬಿ.ಸುಕನ್ಯಾಮಾರುತಿ | 5 |
| 12. | ಕ)ರುದ್ರಪ್ಪ<br>ಚ)ಕಿಡ್ನಿಸ್ಟೋನ್<br>ಟ)ಶಾಂಭವಿ<br>ತ)ಹೃದ್ಯಮಪ್ಪ<br>ಪ)ಚಂದ್ರಭವನ | 5 |
| 13. | ನಕುಲ ಮತ್ತು ಸಹದೇವ | 2 |
| 14. | ಊರಹಂದಿಗೆ. ನಾರುವ ದುರ್ಗಂಧ ಬಿಡದ ಕಾರಣ | 2 |
| 15. | ಬೆಳಗಿನಿಂದ ಸಂಜೆತನಕ ಕಣ್ಮರೆಯಾಗಿ, ಒಮ್ಮೊಮ್ಮೆ ರಜಾದಿನಗಳಲ್ಲಿ ಕುಳಿತು ಕೆಮ್ಮುವ ಪ್ರಾಣಿಯಾಗಿ | 2 |
| 16. | "ಮಾತೇ ಮರೆತು ಹೋಗಿದೆ ಕಣೇ, ಮಾತಾಡು ಮಾತಾಡು ಆಡು ಮಾತಾಡುತ್ತಿರು ನಿಲ್ಲಿಸಬೇಡ" | 2 |
| 17. | ದನಗಳಿಗೆ ಮೇವಿಲ್ಲ, ಜನಗಳಿಗೆ ನೀರಿಲ್ಲ, ಗಂಜಿಗೂ ಗತಿಯಿಲ್ಲ | 2 |
| 18. | ಮಗುವಿಗೆ ಮೈಯಲ್ಲಿ ಸರಿಯಿಲ್ಲ, ಕೆಮ್ಮು ಹೋಗುತ್ತಲೇ ಇಲ್ಲ, ಶಿವನೂರು ಸ್ವಾಮಿಗಳಿಗೆ ತೋರಿಸಬೇಕು | 2 |

| | | |
|---|---|---|
| 19. | ಟೋಪಿ ಧರಿಸಿದ ನಾಜೂಕು ಪೋಷಾಕಿನ ಮಾರ್ಷ್ ಮತ್ತು ಆವರೆಗೂ ನೋಡಿರದ ಪ್ರಾಣಿ ಕುದುರೆ (ಅದರ ಖುರಪುಟದ ಸದ್ದು) ಈ ಎರಡು ವಿಚಿತ್ರಗಳನ್ನು ಒಮ್ಮೆಲೆ ಕಂಡ ಅವರು ಹೆದರಿ ಮಕ್ಕಳನ್ನು ಎಳೆದುಕೊಂಡು ದಟ್ಟಡವಿಯಲ್ಲಿ ಮಿಂಚಿನಂತೆ ಮಾಯವಾದರು. | 2 |
| 20. | ರತ್ನದ ಕೈಗಡಗ, ಚಿನ್ನದ ಕಂಠಿಕೆ | 2 |
| 21. | ಚಹಾ ಫಳಾರದ ಅಂಗಡಿಯಲ್ಲಿ ಕರಿದ ತಿನಿಸುಗಳನ್ನು ತಿನ್ನುತ್ತಿದ್ದುದರಿಂದ ಅವರ ಜಡ್ಡು ವಾಸಿಯಾಗುತ್ತಿರಲಿಲ್ಲ. ಹಾಗಾಗಿ ಹಾಗೂ ಸಾಯುತ್ತೇವೆ ಹೀಗೂ ಸಾಯುತ್ತೇವೆ ಕರಿದಿದ್ದನ್ನು ತಿಂದು ಸಾಯುತ್ತೇವೆ ಎನ್ನುವ ಜಿದ್ದು ಅವರದ್ದು. | 2 |
| 22. | ಇನಾಮು ಕೇಳಲೋ ಅಥವಾ ಚಂದಾ ವಸೂಲಿಗೋ, ಇಲ್ಲವೇ ಮನೆ ಉಪಯೋಗಕ್ಕೆ ಕಾಫಿ ಬೀಜವನ್ನೋ ಏಲಕ್ಕಿಯನ್ನೋ ಕೇಳಲು | 2 |
| 23. | ಅರಣ್ಯ ಇಲಾಖೆಯವರು ಕಾಡಿನ ಮರಗಳನ್ನು ತೆಗೆದು ನೀಲಗಿರಿ, ಅಕೇಶಿಯಾ ಮುಂತಾದ ಆನೆಗಳಿಗೆ ನಿರುಪಯುಕ್ತ ಮರಗಳನ್ನು ಬೆಳೆಸುತ್ತಿರುವುದರಿಂದ ಕಾಡಾನೆಗಳು ಊರಿನ ಕಡೆ ಬಂದು ಹಾವಳಿ ನೀಡಲು ಪ್ರಾರಂಭಿಸಿವೆ | 2 |
| 24. | ಲಾರಿ ಮತ್ತು ನಾಟಾಗಳಿಗೆ ಕಟ್ಟಿದ್ದ ಹಗ್ಗ ಬಿಚ್ಚದೇ ಆನೆಗೆ ನಾಟಾ ತಳ್ಳಲು ಹೇಳಿದ ಕಾರಣ ನಾಟಾ ಸಮೇತ ಲಾರಿ ಉರುಳಿ ಬಿದ್ದಾಗ ಕ್ಯಾಬಿನ್ನಿನಲ್ಲಿದ್ದ ಮಣಭಾರದ ಜ್ಯಾಕ್ ಡ್ರೈವರನ ತಲೆ ಮೇಲೆ ಬಿದ್ದ ಕಾರಣ. ಆನೆ ನೇರವಾಗಿ ಅವನ ಸಾವಿಗೆ ಕಾರಣವಲ್ಲ. | 2 |
| 25. | ಅವಕ್ಕೆ ತಲೆ ಕೆಟ್ಟು ಕಂಡ ಕಂಡಿದ್ದಕ್ಕೆಲ್ಲಾ ಕಚ್ಚುತ್ತವೆ, ಮೇಜು ಕುರ್ಚಿ ಕಾಲಿಗೆಲ್ಲಾ ಕಚ್ಚುತ್ತವೆ. | 2 |
| 26. | ಆನೆಯ ಕಾಲಿನ ಉಗುರುಗಳ ಬಳಿ ಅಂಕುಶದಿಂದ ತಿವಿದರೆ ಅದಕ್ಕೆ ಪ್ರಾಣವೇ ಹೋಗುವಷ್ಟು ನೋವಾಗುತ್ತದೆಂದೂ, ಆ ಭಯಂಕರ ನೋವಿಗೆ ಎಂತಹ ಪುಂಡು ಆನೆಯಾದರೂ ನಾಲ್ಕು ಸಾರಿ ತಿವಿಯುವುದರೊಳಗೆ ಶರಣಾಗಿ ನೆಲದ ಮೇಲೆ ಮಲಗಿ ಬಿಡುತ್ತದೆಂದು | 2 |
| | **ಕವಿ, ಪದ್ಯದ ಹೆಸರಿಗೆ ಒಂದು ಅಂಕ, ವಾಕ್ಯ ಬಳಕೆಯ ಸಂದರ್ಭದೊಂದಿಗೆ ಸ್ವಾರಸ್ಯಕ್ಕೆ 2 ಅಂಕ** | |
| 27. | ನಾಗಚಂದ್ರ – ಕದಡಿದ ಸಲಿಲಂ ತಿಳಿವಂದದೆ.<br>ರಾವಣನಲ್ಲಿ ಸೀತೆಯ ಬಗ್ಗೆ ವೈರಾಗ್ಯಭಾವ ಮೂಡಿದ ಸಂದರ್ಭದಲ್ಲಿ ಕವಿಯು ಹೇಳಿದ ಮಾತು. ಕವಿಯು ರಾವಣನ ಮನಃಪರಿವರ್ತನೆಯನ್ನು ಹೊಗಳಿ ಅವನನ್ನು ಉದಾತ್ತನನ್ನಾಗಿ ಮಹಾನುಭಾವನನ್ನಾಗಿ ವರ್ಣಿಸಿರುವ ಪರಿ. | 3 |
| 28. | ಕುಮಾರವ್ಯಾಸ – ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಪದ್ಯಭಾಗ<br>ದ್ರೌಪದಿಯು ಕೀಚಕನ ಉಪಟಳದಿಂದ ಪಾರು ಮಾಡುವ ತನ್ನ ಗಂಡಂದಿರ ಮನಃಸ್ಥಿತಿಗಳನ್ನು ಅಳೆಯುತ್ತಾ ಈ ಮಾತನ್ನು ಹೇಳಿಕೊಳ್ಳುತ್ತಾಳೆ.<br>ಧರ್ಮಜನ ಬಳಿ ಹೇಳಿದರೆ ಅವನೆಗೆ ಧರ್ಮ, ಕ್ಷಮೆಯ ಗ್ರಹ ಹಿಡಿದಿದೆ, ಅವನಿಗೆ ಹೆಂಡತಿಯ ಕಷ್ಟಕ್ಕಿಂತ ಇತರರನ್ನು ಕ್ಷಮಿಸುವ ಗುಣವೇ ಮಿಗಿಲಾಗಿದೆ, ಪ್ರತೀಕಾರ ಸ್ವಭಾವದವನಲ್ಲವೆಂಬ ಸಿಡುಕುವ ಸಂದರ್ಭ | 3 |
| 29. | ದ.ರಾ.ಬೇಂದ್ರೆ – ಬೆಳಗುಜಾವ<br>ಯೌವನ ವ್ಯಕ್ತಿಯ ಬದುಕಿನ ಸುಗ್ಗಿ–ಸಂಭ್ರಮದ ಕಾಲ, ಅದು ಒಮ್ಮೆ ಮಾತ್ರ | 3 |

| | | |
|---|---|---|
| | ಬರುವುದೆಂದು ಮತ್ತೆ ಮತ್ತೆ ಬರಲಾರದೆಂಬುದನ್ನು ಕವಿ ವಿವರಿಸುತ್ತಾ ಈ ಪ್ರಶ್ನೆಯನ್ನೆತ್ತಿದ್ದಾರೆ.<br>ಪ್ರಕೃತಿಯ ನಿತ್ಯನೂತನತೆ ಮನುಷ್ಯನ ಬಾಳಿಗಿಲ್ಲ. ಹಾಗಾಗಿ ಮನುಷ್ಯ ಬದುಕಿನ ಸುಗ್ಗಿ ಕಾಲವಾದ ತಾರುಣ್ಯವನ್ನು ಅನುಭವಿಸಿ ಎಂದು ಯುವಕರಿಗೆ ಕರೆಕೊಡುವ ಸಂದರ್ಭ. | |
| 30. | ಹಾ.ಮಾ.ನಾಯಕ – ಕನ್ನಡವನ್ನು ಕಟ್ಟುವ ಕೆಲಸ<br>ಶಿಕ್ಷಣ ಮಾಧ್ಯಮದ ಬಗ್ಗೆ ಲೇಖಕರು ಚರ್ಚಿಸುತ್ತಾ ಈ ಮಾತುಗಳನ್ನಾಡಿದ್ದಾರೆ.<br>ಶಿಕ್ಷಣ ಮಾಧ್ಯಮದ ವಿಚಾರವಾಗಿ ಪ್ರತಿಪಾದಿಸುವ ಲೇಖಕರು, ಕನ್ನಡ ಮಾಧ್ಯಮದ ಬಗ್ಗೆ ಡಾ.ಸಿ.ಎನ್.ಆರ್.ರಾವ್ ಉದಾಹರಣೆ, ಇಂಗ್ಲೀಷನ್ನು ಕಲಿಸಿ, ನಮ್ಮ ಭಾಷೆಯಲ್ಲಿ ಎಲ್ಲ ವಿಷಯಗಳನ್ನು ಓದಬೇಕೆಂದೂ ಅದೇ ಮೈಗೆ ಹತ್ತುವುದೆಂದೂ ಹೇಳುವ ಸಂದರ್ಭ. | 3 |
| 31. | ಪ್ರೊ.ಎಚ್.ಆರ್.ರಾಮಕೃಷ್ಣರಾವ್ – ಬದುಕನ್ನು ಪ್ರೀತಿಸಿದ ಸಂತ<br>ಕಲಾಂ ಅವರನ್ನು ಭೇಟಿಯಾದ ಮಕ್ಕಳು ಕೇಳುತ್ತಿದ್ದ ಪ್ರಶ್ನೆಯಿದು.<br>ಅಬ್ದುಲ್ ಕಲಾಂ ರವರನ್ನು ಭೇಟಿಯಾದ ಮಕ್ಕಳಿಗೆ ಸಹಜವಾಗಿ ಕುತೂಹಲ. ಅದರಿಂದ ಅವರನ್ನು ಮೇಲಿನಂತೆ ಪ್ರಶ್ನಿಸುತ್ತಿದ್ದರು. ಅದಕ್ಕೆ ಕಲಾಂ ಯಶಸ್ಸಿನ ಪಂಚಾಕ್ಷರಿ ಮಂತ್ರಗಳನ್ನು ಉತ್ತರವಾಗಿ ನೀಡುತ್ತಿದ್ದರು. ಮಕ್ಕಳಿಗೆ ಅದೇ ಯಶಸ್ಸಿನ ಗಾಯತ್ರಿ ಮಂತ್ರದಂತೆ ಇರುತ್ತಿತ್ತು. | 3 |
| 32. | ಪೂರ್ಣಚಂದ್ರ ತೇಜಸ್ವಿ – ಕೃಷ್ಣೇಗೌಡನ ಆನೆ<br>ಮೂಡಿಗೆರೆಯ ಜನರು ರೆಹಮಾನ್‌ಗೆ ಹೇಳುವ ಮಾತಿದು.<br>ರೆಹಮಾನನ ಪೆಟ್ಟಿಗೆ ಅಂಗಡಿಯನ್ನು ಆನೆ ದೂಡಿ ಬೀಳಿಸಿದ ಸಂದರ್ಭ. ಜುಬೇದಾಳ ಸಾಕ್ಷಿ, ರೆಹಮಾನ್ ಆನೆಗೆ ಅನ್ನಬಾರದ್ದನ್ನು ಅಂದದ್ದು, ಕೊನೆಗೆ ಜನರು ಮೇಲಿನಂತೆ ಆನೆಗೊಂದು ವ್ಯಕ್ತಿತ್ವ ಆರೋಪಿಸಿ ರೆಹಮಾನ್ ಗೆ ಉಗಿದ ಸಂದರ್ಭ. | 3 |
| 33. | ಪೂರ್ಣಚಂದ್ರ ತೇಜಸ್ವಿ – ಕೃಷ್ಣೇಗೌಡನ ಆನೆ<br>ಟೆಲಿಫೋನ್ ಲೈನ್ ಮನ್ ಶಂಕ್ರಪ್ಪ ಇಂಜಿನಿಯರ್ ರಮೇಶ್ ಬಾಬುಗೆ ಹೇಳುವ ಮಾತಿದು.<br>17ನೇ ಕಂಬದ ಮೇಲೆ ತಿಪ್ಪಣ್ಣ ರಪೇರಿ ಭಂಗಿಯಲ್ಲೇ ಕುಳಿತಿದ್ದನ್ನು ನೋಡಿ ಕೂಗಿ ಕರೆದರೂ ಪ್ರತಿಕ್ರಿಯೆ ಬಾರದಿದ್ದಾಗ ಕಾತರ ಕಳವಳದ ದನಿಯಲ್ಲಿ ಮೇಲಿನ ಮಾತನ್ನು ಹೇಳುವ ಸಂದರ್ಭ. | 3 |
| 34 | ಮನುಷ್ಯ ಮನುಷ್ಯರ ನಡುವೆ ಅಂತಃಕರಣ ಸ್ಪಂದಿಸಿ ಮನಸ್ಸುಗಳು ಬೆರೆತು ಮೇಲು ಕೀಳೆಂಬ ತನುವಿನ ಅಹಂಕಾರಗಳು ಕರಗಬೇಕು.ಹೃದಯ ವೈಶಾಲ್ಯತೆ, ವಿನೀತಭಾವ ಮೂಡಿ ಸನ್ನಡತೆ ಏರ್ಪಡಬೇಕು. ಪರಸ್ಪರ ಸೋಂಕಿದಾಗ ಶಾಂತಿ, ಸಮಾಧಾನ ಸಮಾನತೆಯ ಪುಳಕಗಳು ಹೊಮ್ಮಬೇಕು. ಸಂಧಿಸಿದಾಗ ಆನಂದಭಾಷ್ಪ ಸೂಸಬೇಕು, ಮಾತಿನಲ್ಲಿ ಎದೆ ತುಂಬಿ ಧ್ವನಿ ಆರ್ದ್ರವಾಗಬೇಕು. ಇವೇ ನೈಜಭಕ್ತಿಯ ಭಕ್ತನ ಲಕ್ಷಣ. ಇಲ್ಲವಾದರೆ ಅದು ಢಾಂಭಿಕತೆ. | 4 |
| 35. | ಭೀಮನು ದ್ರೌಪದಿಯ ಸ್ಥಿತಿಗೆ ಕಂಬನಿದುಂಬಿ ರೋಷದಿಂದ ಮನದಲ್ಲಿಯೇ | 4 |

| | | |
|---|---|---|
| | ಹಗೆಗಳನ್ನು ಹಿಂಡುತ್ತಾನೆ. ಒಳಗೇ ಪುಳಕಗೊಳ್ಳುವ ಅವನು ಮೆಲ್ಲನೆ ದ್ರೌಪದಿಯನ್ನು ತೆಗೆದಪ್ಪಿ ತನ್ನ ಉತ್ತರೀಯದ ಸೆರಗಿನಿಂದ ಅವಳ ಕಂಬನಿಯನ್ನು ಒರೆಸುತ್ತಾನೆ. ಅವಳ ಮುಂಗುರನ್ನು ನೇವರಿಸಿ, ಗಲ್ಲವನ್ನು ಹಿಡಿದು ಮುದ್ದಾಡುವನು. ಮಂಚದ ಪಕ್ಕದ ಗಿಂಡಿಯ ನೀರಿನಿಂದ ಅವಳ ಮುಖವನ್ನು ತೊಳೆದು, ಅಣ್ಣನಾಜ್ಞೆಯ ಗೆರೆಯ ದಾಂಟಿದೆಯೆಂದು ಧೈರ್ಯ ತುಂಬುವನು. ಅಲ್ಲದೆ ಕೀಚಕನ ಬಸುರನ್ನು ಬಗೆದು,ಅಡ್ಡಬಂದರೆ ವಿರಾಟವಂಶವನ್ನು ತೊಡೆದು, ಕೌರವರನ್ನು ನಾಶಮಾಡಿ, ದೇವತೆಗಳು ಅಪಸ್ವರಗೈದರೆ ಅವರ ಮುಖವನ್ನು ಅಮರಾದ್ರಿಯಲ್ಲಿ ತೇಯುವೆನೆಂದು ದ್ರೌಪದಿಯನ್ನು ಸಂತೈಸಿ ಕಳುಹಿಸುವನು. | |
| 36. | ಶತ್ರುಗಳನ್ನು ಎದುರಿಸಿ ಹೋರಾಡಿ ಕೊಲ್ಲಬಲ್ಲ ಸಾಮರ್ಥ್ಯ ವೀರನಿಗಿರಬೇಕು. ಪ್ರಪಂಚವನ್ನು ಅರಿತವನು ಮತ್ತು ಚತುರತೆಯನ್ನು ಹೊಂದಿದವನು ತಂತ್ರ–ಪ್ರತಿತಂತ್ರಗಳನ್ನು ಅರಿತವನು ಮಂತ್ರಿಯಾಗಬೇಕು.<br>ರಾಜನಿಗೆ ಕ್ರೋಧಗುಣವಿರಬಾರದು, ಶಾಂತಿ, ಕ್ಷಮೆ, ದಯಾಗುಣಗಳಿರಬೇಕು.<br>ಯೋಗಿಯಾದವನು ಅರಿಷಡ್ವರ್ಗಗಳನ್ನು ಗೆದ್ದವನಾಗಿರಬೇಕು, ಚಿತ್ತವೃತ್ತಿ ನಿರೋಧ, ಇಂದ್ರಿಯನಿಗ್ರಹವುಳ್ಳವನಾಗಿರಬೇಕು. | 4 |
| 37. | ಬುದ್ಧಿವಂತರ ನೆರೆಯಿರಬೇಕು. ಅಕ್ಕಪಕ್ಕದಲ್ಲಿ ಬುದ್ಧಿವಂತರಿದ್ದರೆ, ಒಳ್ಳೆಯವರಿದ್ದರೆ ನಾವೂ ಅವರಂತೆ ಬುದ್ಧಿವಂತಿಕೆಯನ್ನು ರೂಢಿಸಿಕೊಳ್ಳಬಹುದು. ಹಾಗಲ್ಲದೆ ನೆರೆಯಲ್ಲಿ ದುಷ್ಟರು, ಕುಲಗೇಡಿಗಳಿದ್ದಲ್ಲಿ ನಾವು ಇರುವ ಬುದ್ದಿಯನ್ನು ಕಳೆದುಕೊಂಡು ಅವರ ಗುಣಗಳನ್ನೇ ಕಲಿತುಕೊಳ್ಳಬಹುದು. ಆದ್ದರಿಂದ ನಾವು ವಾಸಿಸುವ ಪರಿಸರದಲ್ಲಿ ಬುದ್ದಿವಂತರ ನೆರೆಯಿರುವುದು ಮುಖ್ಯವೆಂದು ಜನಪದರು ತಿಳಿಯಹೇಳಿದ್ದಾರೆ. | 4 |
| 38 | ಬಸಲಿಂಗ ಕಣ್ಣುಬೇನೆ ಎಂದು ಉದಾಸೀನ ಮಾಡಿದ. ನಂತರ ನೊವು ಜಾಸ್ತಿಯಾಗಿ ಕಣ್ಣು ಮಂದವಾಗುತ್ತಿದೆ ಎನ್ನಿಸಿ ಹೆದರಿಕೆಯಾದಾಗ ನಗರದ ತನ್ನ ಎಂದಿನ ವೈದ್ಯರಿಗೆ ತೋರಿಸಿದ. ಅವರು ಹಚ್ಚಿಕೊಳ್ಳಲು ಒಂದು ಲೇಹ್ಯ ಕೊಟ್ಟು ಕಳುಹಿಸಿದರು. ಸ್ವಲ್ಪ ಸಮಾಧಾನದಿಂದ ಮನೆಗೆ ಬಂದ ಅವನು ವೈದ್ಯರು ಹೇಳಿದಂತೆ ಲೇಹ್ಯ ಹಚ್ಚಿಕೊಂಡು, ಬಟ್ಟೆಯ ಕಾವು, ಉಪ್ಪಿನ ಕಾವು ಕೊಟ್ಟುಕೊಂಡ. ನೋವು ಹೆಚ್ಚಾದಾಗ ಸರ್ಕಾರಿ ಆಸ್ಪತ್ರೆಯ ಡಾ.ತಿಮ್ಮಪ್ಪನವರ ಬಳಿಬಂದ. | 4 |
| 39. | ಸೀತಾಗೆ ಓದುವ ಆಸಕ್ತಿ ಇರಲಿಲ್ಲ, ಸಿನೆಮಾ, ಮಾರ್ಕೆಟ್ ಎಂದು ಸುತ್ತುವ ಸ್ವಭಾವ, ಎಸ್ ಎಸ್ ಎಲ್ ಸಿಯಲ್ಲಿ ಫೇಲ್. ಕೈತುಂಬಾ ಸಂಬಳ ತರುವ ಗಂಡ ಸಿಗದೇ ಗಂಡನೊಂದಿಗೆ ಹೊಂದಿಕೊಳ್ಳಲು ಅಗಲೇ ಇಲ್ಲ. ತನ್ನ ಸಂಸಾರದ ಬಗ್ಗೆ ನೂರು ದೂರು ಹೇಳುತ್ತಿದ್ದಳು. ಜೀವನದಲ್ಲಿ ಎಲ್ಲವೂ ಸುಲಭವಾಗಿ ತಟ್ಟನೆ ಸರಿಹೋಗಿಬಿಡಬೇಕು ಎಂದು ನಂಬಿದ್ದಳು. ತನ್ನ ಕಿರುಬೆರಳನ್ನೂ ಎತ್ತಲೂ ಸಿದ್ಧಳಿರಲಿಲ್ಲ. ಇರುವುದು ಆಕೆಗೆ ಸಾಲುತ್ತಿರಲಿಲ್ಲ. ಬೇಕು ಅಂದದ್ದನ್ನು ದುಡಿದು ಗಳಿಸಲು ಸಿದ್ಧವಿರಲಿಲ್ಲ. | 4 |
| 40. | ತೋಟದ ಅಂಚು ಮೆತ್ತಗಾಗಿರುವುದನ್ನು ಅರಿಯದೆ ಅಲ್ಲೇ ಕುಳಿತು ಮುಸುರೆ ಪಾತ್ರೆ ತೊಳೆಯುತ್ತಾ ತಾನು ಕೇಳಿದ್ದ ಹರಿಕಥೆಯ ಉಪಕಥೆಗಳನ್ನು ನೆನಪಿಸಿಕೊಳ್ಳುತ್ತಿರುವಾಗ ಕಾಲಡಿಯ ಮಣ್ಣು ಕುಸಿದು ಗುಡ್ಡನ ಸಮೇತ ಪಾತ್ರೆ, ಸೌಟು, ತಪ್ಪಲೆ, ಬೆಳ್ಳಿಲೋಟ ಎಲ್ಲವೂ ನೀರು ಪಾಲಾದವು. ಗುಡ್ಡ ಈಜಿಕೊಂಡು | 4 |

| | | |
|---|---|---|
| | ಮೇಲೆ ಬಂದವನು ಅಳುತ್ತಾ ತನ್ನಪ್ಪ ಕುದುಪನತ್ತ ಧಾವಿಸಿ ಸಂಗತಿಯನ್ನು ತಿಳಿಸಿದ. ಧಣಿಗಳಿಗೆ ಈ ವಿಚಾರ ತಿಳಿದರೆ ಸಿಟ್ಟಿನ ಭರಕ್ಕೆ ತಾವೆಲ್ಲರೂ ಹೊಳೆಯ ಪಾಲಾಗುವುದು ಖಂಡಿತ ಎಂದು ಭಾವಿಸಿದ ಕುದುಪ ಕೋಮಣಾಲಂಕೃತನಾಗಿ ಹೊಳೆಯಲ್ಲಿ ಮುಳುಗಿ ನೆಲಕಚ್ಚಿರುವ ಪಾತ್ರೆಗಳನ್ನು ಜಾಲಾಡಿ ಕುಸಿದ ಮಣ್ಣಡಿಯಲ್ಲಿ ಸಿಗುವಷ್ಟು ಪಾತ್ರೆಗಳನ್ನು ಮೇಲೆತ್ತಿದನು. ಆದರೆ ಏನು ಮಾಡಿದರೂ ಧಣಿಗಳ ಮನೆಯ ಬೆಳ್ಳಿಲೋಟ ಸಿಗಲಿಲ್ಲ. | |
| 41. | ಮಠದ ಜಗದ್ಗುರುಗಳನ್ನು ಅಡ್ಡಪಲ್ಲಕ್ಕಿಯಲ್ಲಿ ಹೊರತೊಡಗಿದ್ದರಿಂದ ಆನೆ ನಿರುಪಯುಕ್ತವೆನ್ನಿಸಿದ್ದು–ಮಾವುತ ವೇಲಯುಧ ದಿನದ ಇಪ್ಪತ್ತನಾಲ್ಕು ಗೋಟೆಯೂ ಕುಡಿದೇ ಇರುವ ಮೂಲಕ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆನೋವಾಗಿದ್ದದ್ದು–ಅವನ ದುರ್ನಡತೆಗಾಗಿ ಛೀಮಾರಿ ಹಾಕಿ ಹೊರಹಾಕಿದ್ದಕ್ಕೆ ಆನೆ ಊಟವನ್ನೇ ವರ್ಜಿಸಿದ್ದು– ಮತ್ತೆ ಅವನನ್ನು ಕೇರಳದವರೆಗೂ ಹೋಗಿ ಕರೆ ತಂದದ್ದು– ಆನೆ ಇರುವವರೆಗೂ ತನ್ನ ಅನಿವಾರ್ಯತೆ ಅರಿತ ವೇಲಾಯುಧ ಮತ್ತೆ ಮಠಕ್ಕೆ ಕಿರುಕುಳಕೊಡಲಾರಂಬಿಸಿದ್ದು | 4 |
| 42. | ಪಿಡಬ್ಲ್ಯುಡಿನವರು, ಕರೆಂಟಿನವರು, ಟೆಲಿಫೋನಿನವರು ಅರಣ್ಯ ಇಲಾಖೆಗೆ ಎನಿಮಿ ನಂಬರ್ ಒನ್–ರಸ್ತೆಗೆ ಟಾರು ಹಾಕಲು ರಸ್ತೆ ಮರಾನೆಲ್ಲಾ ಕಡಿದು ಟಾರು ಕಾಯಿಸಿಕೊಳ್ಳುವ ಪಿಡಬ್ಲ್ಯುಡಿನವರು– ಕರೆಂಟಿನವರು, ಟೆಲಿಫೋನಿನವರು ಲೈನು ಎಳೆಯೋದಕ್ಕೆ ಫಾರೆಸ್ಟ್ ಕ್ಲಿಯರ್ ಮಾಡ್ತೀವಿ ಅಂತ ಎಲ್ಲೆಂದರಲ್ಲಿ ಸಾವಿರಾರು ಎಕರೆ ಕಾಡು ಕಡಿದು ಹಾಳು ಮಾಡಿದ್ದು–ಈಗ ಹಳ್ಳಿ ಹಳ್ಳಿಗೆ ಕರೆಂಟ್ ಕೊಡಬೇಕಂತ ಸರ್ಕಾರ ಪಾಲಿಸಿ ಮಾಡಿರೋದ್ರಿಂದ ಲೈನ್ ಕ್ಲಿಯರ್ ಮಾಡೋ ನೆಪದಲ್ಲಿ ಇವರ್‍ಯಾರೂ ಮನೆಗೆ ಸೌದೆ ಕೊಳ್ತಾನೆ ಇಲ್ಲ–ಇವರನ್ನು ಹೀಗೆ ಬಿಟ್ಟರೆ ಫಾರೆಸ್ಟ್ ಡಿಪಾರ್ಟಮೆಂಟು ಬಾಗಿಲು ಮುಚ್ಚಬೇಕಾಗುತ್ತೆ, ಇವರಿಗೆ ಸರಿಯಾಗಿ ಬುದ್ಧಿ ಕಲಿಸಬೇಕು | 4 |
| 43. | ವೇಲಾಯುದನು ಆನೆಯನ್ನು ಹದ್ದುಬಸ್ತಿನಲ್ಲಿಡದಿದ್ದುದಕ್ಕೆ ಕೃಷ್ಣೇಗೌಡರು ಬಾಯಿಗೆ ಬಂದ ಹಾಗೆ ಕಾರಣ ಆತ ಆನೆಯೊಂದಿಗೆ ಲಾಯದಲ್ಲೇ ಮಲಗಲು ಹೊರಟದ್ದು–ನೀನ್ಯಾವ ಸೀಮೆ ಗಂಡಸು ಎಂದು ಜರೆದದ್ದು–ಚೂರು ತಪ್ಪು ಮಾಡಿದರೂ ತನ್ನನ್ನು ಬಡಿಯುವ ಗಂಡ ಆನೆಯ ಬಗ್ಗೆ ಕಾಳಜಿ ತೋರುತ್ತಿದ್ದರಿಂದ ಆಕೆಗೆ ವಿಚಿತ್ರ ರೀತಿಯ ಸವತಿಮಾತ್ಸರ್ಯ ಬೆಳೆದದ್ದು–ಅದು ಹೆಣ್ಣಾನೆಯಾದ ಕಾರಣ ಮತ್ತು ಅದು ವೇಲಾಯುಧನನ್ನು ತುಂಬಾ ಹಚ್ಚಿಕೊಂಡಿದ್ದರಿಂದ– ವೇಲಾಯುಧ ಅದನ್ನು ಹಗಲು ರಾತ್ರಿ ಎನ್ನದೇ ಕೆಲಸಕ್ಕೆ ಕರೆದೊಯ್ಯುತ್ತಿದ್ದರಿಂದ ಆಕೆ ಆನೆಯನ್ನು ತನ್ನ ಪ್ರತಿಸ್ಪರ್ಧಿ ಎಂದು ತಿಳಿದದ್ದು–ಮದುವೆಯಾಗಿ ಹಲವು ವರ್ಷ ಕಳೆದಿದ್ದರೂ ತಾನಿನ್ನು ಬಸುರಿಯಾಗದಿರುವುದು–ಹೆಣ್ಣಾದವಳು ತನ್ನ ಗಂಡ ಕಾರೋ ಲಾರಿಯೋ ಟ್ರಾಕ್ಟರೋ ಯಾವುದನ್ನೇ ಆಗಲಿ ಹಚ್ಚಿಕೊಂಡರೆ ಕೆಲವು ಹೆಂಗಸರಿಗೆ ಸಿಟ್ಟೆ ಬರುತ್ತದೆ, ತಮ್ಮ ಆಕರ್ಷಣ ಶಕ್ತಿಗೆ ಸವಾಲೆಂದೇ ಭಾವಿಸುತ್ತಾರೆ. | 4 |
| 44. | (ಕವಿ, ಕೃತಿ, ಪದ್ಯ–1 ಅಂಕ, ಹಿನ್ನೆಲೆ,ಸಂದರ್ಭ–1 ಅಂಕ, ಭಾವಾರ್ಥ–2ಅಂಕ, ಸ್ವಾರಸ್ಯ–1 ಅಂಕ)<br>ನಾಗಚಂದ್ರ – ಪಂಪರಾಮಾಯಣ– ಕದಡಿದ ಸಲಿಲಂ ತಿಳಿವಂದದೆ.<br>ಸೀತೆಯ ಮೋಹಕ್ಕೊಳಗಾಗಿ ರಾವಣನ ಮನಸ್ಸು ಕದಡಿದ ನೀರಾಗಿತ್ತು.ನಂತರ | 5 |

| | | |
|---|---|---|
| | ಆಕೆಯ ಬಗ್ಗೆ ವೈರಾಗ್ಯ ಮೂಡಿದಾಗ ತಿಳಿನೀರಿನಂತಾದ ಉದಾತ್ತತೆಯನ್ನು ಕವಿ ಕೊಂಡಾಡಿದ್ದಾನೆ.<br>ರಾವಣನು ಸೀತಾವ್ಯಾಮೋಹದಿಂದ ಬಿಡುಗಡೆಗೊಂಡ ರೀತಿಯನ್ನು ವಿವರಿಸುವ ಸಂದರ್ಭ.<br>"ಸೂರ್ಯನು ತನಗೆ ಅಂಟಿಕೊಂಡ ಸಂಜೆಯೆಂಬ ಅನುರಾಗದ ಕತ್ತಲನ್ನು ಬಿಡಿಸಿಕೊಳ್ಳುವುದಿಲ್ಲವೇ? ಹಾಗೆಯೇ ಉತ್ತಮನಾದವನು ಮನದಾಸೆಯಿಂದ ಒಮ್ಮೊಮ್ಮೆ ಕೆಟ್ಟದ್ದೆನಿಸಿದ್ದನ್ನು ಮಾಡಿದರೂ ಉತ್ತಮ ಆಚರಣೆಯಿಂದ ಅದನ್ನು ಕಳೆದುಕೊಳ್ಳುವುದಿಲ್ಲವೇ?" ಹಾಗೆಯೇ ರಾವಣನು ಸೀತಾ ವ್ಯಾಮೋಹದ ಕಳಂಕದಿಂದ ಕಳಚಿಕೊಂಡನು.<br>ರಾವಣನಲ್ಲಿ ಆದ ವಿವೇಕೋದಯವನ್ನು ಕವಿಯು ಸೂರ್ಯನಿಗೆ ಹೋಲಿಸಿ ಸಮರ್ಥಿಸಿರುವ ರೀತಿ ಸೊಗಸಾಗಿದೆ | |
| | ಅಥವಾ | |
| | ನಿಸಾರ್ ಅಹಮದ್ – ಶಿಲುಬೆ ಏರಿದ್ದಾನೆ<br>ಜಗತ್ತಿಗೆ ಪ್ರೀತಿ, ದಯೆ ಕರುಣೆಯ ಸಂದೇಶವನ್ನು ಸಾರಿದ ಜೀಸಸ್‌ನ ಮಾನವೀಯ ಕಾಳಜಿಗಳು ಇಂದು ನಮ್ಮೊಳಗೆ ಅನುರಣನಗೊಳ್ಳಬೇಕಾದ ಅಗತ್ಯವಿದೆ ಎಂದು ಕವಿತೆ ಸೂಚಿಸುತ್ತದೆ.<br>ಕವಿತೆಯು ಆರಂಭದಲ್ಲಿ ಕ್ರಿಸ್ಮಸ್ ಹಬ್ಬದ ಆಚರಣೆಯ ವಿವರಗಳನ್ನು ನೀಡುತ್ತದೆ.<br>"ಕ್ರಿಸ್ಮಸ್ ಹಬ್ಬ ಜಗತ್ತಿನಾದ್ಯಂತ ಕ್ರಿಶ್ಚಿಯನ್ ಧರ್ಮೀಯರ ಮನೆಯಲ್ಲಿ ಸಂಭ್ರಮವನ್ನು ಹೊತ್ತು ತರುತ್ತದೆ. ಕ್ರಿಸ್ಮಸ್ ಮನೆಗೆ ಬಂದರೆ ಜೊತೆಯಲ್ಲಿ ಕೇಕು, ಚಳಿ, ನಕ್ಷತ್ರದೀಪಗಳು ಡಿಸೆಂಬರ್‌ನ ಚಳಿಯಲ್ಲಿಯೂ ಸಡಗರ ನೀಡುತ್ತವೆ. ಮನೆಯೊಳಗೆ ನಕಲಿ ಪ್ಲಾಸ್ಟಿಕ್ ಗಿಡಗಳು ಬಂದು ಕುಳಿತರೆ, ಆ ಗಿಡಕ್ಕೆ ಹತ್ತಿಯಿಂದ ಮಂಜಿನರೂಪವನ್ನು ಕೊಡುತ್ತಾರೆ. ಸ್ಕರ್ಟ್ ಧರಿಸಿರುವ ಹುಡುಗಿಯು ಮೊಣಕಾಲೂರಿ ಪ್ರಾರ್ಥಿಸುತ್ತಾ ಭಕ್ತಿಯ ಬೆಚ್ಚನೆಯ ಅನುಭವವನ್ನು ಅನುಭವಿಸುತ್ತಾಳೆ."<br>ಕ್ರಿಸ್ಮಸ್ ಹಬ್ಬದ ಅಲಂಕಾರದಲ್ಲಿ ನಕಲು ವಸ್ತುಗಳನ್ನು ಬಳಸಿದರೂ ಪ್ರಾರ್ಥನೆಯ ಭಕ್ತಿಭಾವಗಳು<br>ಅಸಲಿಯಾಗಿರುವುದನ್ನು ಗಮನಿಸಬಹುದು. | 5 |
| 45 | ಕವಿ–ಕಾವ್ಯ ರಚನೆಗಾರ, ಆವರಿಸು<br>ಅರಿ–ವೈರಿ,ತಿಳಿ<br>ದೊರೆ–ರಾಜ, ಸಿಗುವುದು | 2 |
| 46 | ಸಿರಿ–ಶ್ರೀ<br>ಆಗಸ–ಆಕಾಶ<br>ಬೀರ–ವೀರ | 2 |
| 47 | ವಾಕ್ಯರಚನೆ: ವಿದ್ಯಾರ್ಥಿಯ ವಿವೇಚನೆಗೆ | 2 |
| 48 | ಹಾಸುಗಂಬಿ–ಹಾಸು<br>ರಸಬಳ್ಳಿ–ರಸ<br>ಮಲತಾಯಿ–ಮಲ | 2 |

| | | |
|---|---|---|
| 49 | ವಿದ್ಯಾರ್ಥಿಗಳ ವಿವೇಚನೆಗೆ | 2 |
| 50 | ಹೋದನು–ಭೂತಕಾಲ<br>ತಿನ್ನುತ್ತಾರೆ–ವರ್ತಮಾನಕಾಲ<br>ಬರುವರು–ಭವಿಷ್ಯತ್ ಕಾಲ | 2 |
| 51 | ಕರೆಯಿತು–ಕರೆಯದು<br>ಬರೆವನು–ಬರೆಯನು<br>ಹೋಗುವಳು–ಹೋಗಳು | 2 |
| 52 | ಪ್ರಬಂಧಲೇಖನ<br>(ಪೀಠಿಕೆ–1 ಅಂಕ, ವಿಷಯ ಪ್ರತಿಪಾದನೆ–3 ಅಂಕಗಳು, ಮುಕ್ತಾಯ–1 ಅಂಕ)<br><br>(ಭಾಷೆ, ವಿಷಯದ ಮಹತ್ವವನ್ನು ಸಂಕ್ಷಿಪ್ತವಾಗಿ ಒತ್ತಿ ಹೇಳುವ ಬರವಣಿಗೆ, ಶೈಲಿ,ತರ್ಕಬದ್ಧವಾದ ಮಂಡನೆ, ಉದ್ಧರಣಗಳು,ಪ್ರತಿಪಾದನಾ ಕೌಶಲ ಇವುಗಳನ್ನು ಗಮನಿಸಿ ಮೌಲ್ಯಮಾಪಕರು ತಮ್ಮ ವಿವೇಚನಾನುಸಾರ ಅಂಕನಿಗದಿ ಮಾಡವುದು) | 5 |
| 53 | ಪತ್ರಲೇಖನ<br>(ಪತ್ರದ ಪ್ರಾರಂಭ–1 ಅಂಕ,ಸಂಬೋಧನೆಯೊಂದಿಗೆ ವಿಷಯ ವಿವರಣೆ–2 ಅಂಕ,ಪತ್ರಾಂತ್ಯ–1 ಅಂಕ)<br>ಮೌಲ್ಯಮಾಪಕರು ವಿಳಾಸ, ದಿನಾಂಕ, ಸೂಕ್ತ ಸಂಬೋಧನೆ, ಪತ್ರದ ಒಡಲು, ಆತ್ಮೀಯ ನಿರೂಪಣೆ, ಗೌರವಪೂರ್ವಕ ಮುಕ್ತಾಯ, ಹೊರವಿಳಾಸ ಇತ್ಯಾದಿಗಳನ್ನು ಗಮನಿಸಿ ವಿವೇಚನಾನುಸಾರ ಅಂಕನಿಗದಿ ಮಾಡುವುದು. | 4 |
| 54 | (ಗಾದೆಯ ಅರ್ಥ, ಮಹತ್ವ – 1 ಅಂಕ, ದೃಷ್ಟಾಂತಗಳೊಂದಿಗೆ ಗಾದೆಯ ವಿಸ್ತರಣೆ– 2 ಅಂಕ, ಆಶಯ, ಗಾದೆಯ ಪ್ರಸ್ತುತತೆಯೊಂದಿಗೆ ಮುಕ್ತಾಯ– 1 ಅಂಕ)<br>ಒಟ್ಟಾರೆ ವಿದ್ಯಾರ್ಥಿಯ ಭಾಷಾ ಸಾಮರ್ಥ್ಯವನ್ನು ಗಮನಿಸಿ ಮೌಲ್ಯಮಾಪಕರು ವಿವೇಚನಾನುಸಾರ ಅಂಕನಿಗದಿ ಮಾಡವುದು. | 4 |